

## ಸೂರ್ಯನ ಮನಃಪರಿವರ್ತನೆಗೆ ಯತ್ನ

ಸೂರ್ಯನ ಮನಸ್ಥಿತಿಯನ್ನು ಸಹಜ ಸ್ಥಿತಿಗೆ ತರಲು ಏನು ಮಾಡಬೇಕೆಂದು ಯೋಚಿಸುವಾಗ ಅವಳಿಗೆ ಆದರ್ಶ ನೆನಪಾಗಿದ್ದ. ವೈದ್ಯನಾಗಿದ್ದ ಆದರ್ಶನಲ್ಲಿ ತನ್ನ ಸಮಸ್ಯೆಗೆ ಪರಿಹಾರ ಸಿಗಬಹುದೆಂದು ಭಾವಿಸಿ ಅವನಿಗೆ ಕರೆ ಮಾಡಿದಳು. ಒಂದೇ ರಿಂಗಿಗೆ ಅವನು ಕರೆ ಸ್ವೀಕರಿಸಿ ‘ಹಲೋ ಅಪೂರ್ವ ಹೇಗಿದ್ದೀರ..? ನಾನು ನಿಮ್ಮ ಕರೆಗೇ ಕಾಯ್ತಾ ಇದ್ದೆ’ ಎಂದ ಉದ್ವೇಗದಿಂದ. ಅವನ ದನಿಯಲ್ಲಿ ಹರ್ಷೋಲ್ಲಾಸವಿತ್ತು.

‘ನನ್ನ ಕರೆಗಾ..? ನಾನು ಕಾಲ್ ಮಾಡ್ತೀನಿ ಅಂತ ಹೇಳಿರಲಿಲ್ಲವಲ್ಲ?’ ಅಪೂರ್ವ ತೀರಾ ಅಮಾಯಕತೆಯಿಂದ ಪ್ರತಿಕ್ರಿಯಿಸಿದಳು.

‘ನಿಮ್ಗೆ ನಾನಂತೂ ನೆನಪಾಗಲ್ವೇನೋ. ನೀವು ಪ್ರತಿಕ್ಷಣ ನನ್ನ ಮನಸಲ್ಲಿರ್ತೀರಿ. ನನಗೆ ಕೆಲಸ ಮಾಡಲು ಬಿಡದೇ ಕಾಡ್ತೀರ’ ಆದರ್ಶ ತನ್ನ ಹೃದಯದ ಭಾವನೆಗಳನ್ನು ಪ್ರಾಮಾಣಿಕತೆಯಿಂದ ಅವಳೆದುರು ತೆರೆದಿಟ್ಟಾಗ, ಅನಿರೀಕ್ಷಿತವಾಗಿದ್ದ ಅವನ ಮಾತುಗಳಿಗೆ ಅವಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದೇ ತೋಚದೆ ಕಕ್ಕಾಬಿಕ್ಕಿಯಾಗಿ ನಿಂತು ಬಿಟ್ಟಳು. ಆದರ್ಶನಂಥ ವ್ಯಕ್ತಿಯ ಹೃದಯದಲ್ಲಿ ತಾನಿರುವೆನೇ? ತನಗೆ ಅಂಥ ಅದೃಷ್ಟವಿದೆಯೇ? ಅವನಿಗೆ ತಾನು